ದಾರಿ ಮಧ್ಯೆ ಸತ್ತರೇ, ಕಂಪನಿಯ ಭಾರಿ ಬೆಲೆಯ ಲಾರಿ ಸರಕಿನ ಗತಿಯೆನ್ನಾ? ಇಲ್ಲಿ ದಿನಾ ಡ್ರೈವರ್ ಕೆಲಸ ಕೇಳಿ ಎದೆಯ ಮೇಲೆ ಕೈ ಕಟ್ಟಿ ನಿಲ್ಲುವ ಸಾಲುಸರತಿಯ ನೂರು ಜನ ದೊಡ್ಡ ಪದವಿಯ ಹೊಸ ಹುಡುಗರು ಬರುತ್ತಿರುವವರು. ನಿನ್ನ ಗಂಡ ಏನು ಕೊಣಮಿಣಿ ಅಕ್ಷರ ಓದಿದ್ದಾನೆ? ಅದಕ್ಕಿಂತ ಮೊದಲು ಆ ರೋಗಿಷ್ಟ ಗಂಡಸು ಬೇಡವೇ ಬೇಡ, ಮೊದಲು ಜಾಗ ಖಾಲಿ ಮಾಡು' ಅಂದು ಕಡ್ಡಿ ಮುರಿದುಬಿಟ್ಟರು.

ತಿರುಮೊಳಿ, 'ಅಪ್ಪಾ ಸಾಮಿಯೇ, ನನಗೆ ಮಸಾಣತ್ತಿಲೇ ಗುಂಡಿ ಅಗೆಯುವ ವೇಲೆ ಸರಿ. ಸತ್ತವರನ್ನು ಸಮಾಧಿ ಮಾಡಲು ಬಂದವರು ಕಾಸು ಕೊಟ್ಟರೆ ಕೊಟ್ಟರು, ಬಿಟ್ಟರೆ ಬಿಟ್ಟರು. ಅಳುವವರ ಮುಂದೆ ನಾನು ಕೈಯೊಡ್ಡಿ ದುಡ್ಡು ಬೇಡುವುದು ಸರಿಯಾ? ನೀವು ಗಂಡನ ಕೆಲಸ ಕಳೆಯುವುದು ನ್ಯಾಯಮಾ? ಇರುವ ಒಂದು ಕೂಸು ಮೂರನೇ ಕ್ಲಾಸು ಪಡಿಕ್ಕಿರದು' ಎಂದವಳು ಇನ್ನು ಏನೇನೋ ಅಹವಾಲು ಮಂಡಿಸಬೇಕೆನ್ನುವಲ್ಲಿ, ಅಳಗಿರಿಯವರು ಕಿವಿಗೆ ಹೆಡ್‌ಫೋನ್ ತಗುಲಿಸಿ ಯಾರೊಂದಿಗೋ ಮಾತಾಡುತ್ತಿರುವವರು. 'ಮೆಸೇಜ್ ವಂದದಾ, ಕೋಡ್ ಎನ್ನ, ಪಾಸ್‌ವರ್ಡ್ ಇರಕ್ಕಾ, ಮುಪ್ಪದು ಕೋಟಿಯಾ ಇಲ್ಲೆ ಇಲ್ಲೇ ನಾಪ್ಪದು ಕೋಟಿ' ಎಂದು ಏನೇನೋ ಮಾತಾಡುತ್ತಿದ್ದಾರೆ. ಎಷ್ಟು ಹೊತ್ತಾದರೂ ಎದುರು ಲ್ಯಾಪ್‌ಟಾಪ್‌ನ ಅಕ್ಷರಗಳಿಂದ ಅವರ ಕಣ್ಣು ಅತ್ತಿತ್ತ ಅಲುಗುತ್ತಿಲ್ಲ. ಬೇರೆಯವರ ಮಾತು ಕಿವಿಗೆ ಕೇಳಿಸುತ್ತಿಲ್ಲ.

ತಿರುಮೊಳಿ, ಅಳಗಿರಿಯವರು ಕೊಟ್ಟ ತಿಂಗಳ ಸಂಬಳದ ಕಾಸು ಹಿಡಿದು, ಆಚೆ ಬೀಸಾಡಿದ್ದ ಪೆಟ್ಟಿಗೆಯನ್ನು ತಲೆಯ ಮೇಲಿಟ್ಟು ಸ್ಮಶಾನಕ್ಕೆ ಬಂದಳು. ಶೆಡ್ಡಿನ ಗೋಡೆಗೆ ನೇತುಹಾಕಿದ್ದ ಕರುಮಾರಿಯಮ್ಮನ ಆಶೀರ್ವಾದದ ಫೋಟೊಜ್ಞಿನ ಕ್ಯಾಲೆಂಡರಿನ ಮುಂದೆ ಕಾಸು ಇಟ್ಟು, ಗಂಡ ನೌಕರಿಯಿಂದ ಡಿಸ್‌ಮಿಸ್ ಆದದ್ದಕ್ಕೆ ಬೆರಳ ನಟಿಕೆ ಮುರಿದು ದೇವತೆಗೆ ಶಾಪ ಹಾಕಿದಳು.

ಆವತ್ತು ರಾತ್ರಿ ಸಾಪಾಡು ತಂದ ಕಣ್ಣಾಸೆಲ್ವಿ ಮರದ ಕೆಳಗೆ ಅವ್ವ ಬಿಸಾಡಿದ್ದ ಪೆಟ್ಟಿಗೆಯೊಳಗೆ ಏನೇನು ಒಡವೆಗಳಿರಬಹುದೆಂದು ತೆರೆದುನೋಡಿದಳು. ಅದರೊಳಗೆಲ್ಲ ಅಂಗೈಯಗಲದ, ಮುಂಗೈಯಗಲದ ಪುಟ್ಟ ಪುಟ್ಟ ಪುಸ್ತಕಗಳು ತುಂಬಿದ್ದವು. ಅಲ್ಲೊಂದು ಚೋಟುದ್ದದ ಪೆನ್ಸಿಲು. ಪೆನ್ಸಿಲಿನಿಂದ ಪುಸ್ತಕದ ಸಾಲುಗಳ ಕೆಳಗೆ ಹಾಕಿದ್ದ ಗೆರೆಗಳು. ಕಣ್ಣಾಸೆಲ್ವಿ ಇನ್ನಷ್ಟು ಕಣ್ಣರಳಿಸಿ ಪುಸ್ತಕದೊಳಗಿನ ಚಿತ್ರಗಳನ್ನೂ, ಅಕ್ಷರಗಳನ್ನೂ ಅದಾಗಲೇ ಓದಲು ಆಸೆ ಇರುವಂತೆ ನೋಡಿದಳು. ಕಣ್ಣಾಸೆಲ್ವಿಗೆ ಆಶ್ಚರ್ಯವೋ ಆಶ್ಚರ್ಯ. ಅಪ್ಪನು ಇಷ್ಟೆಲ್ಲ ಪುಸ್ತಕಗಳನ್ನು ಕೊಂಡದ್ದು ಎಲ್ಲಿ. ಇದನ್ನೆಲ್ಲ ಹೇಗೆ ಓದುತ್ತಿದ್ದನೋ ಕೇಳಬೇಕೆಂದುಕೊಂಡಳು. ಹಾಗೆ ಅವಳು ಕೇಳುವಳೆಂದು ಊಹಿಸಿದವನಾಗಿ ತಂಗಮಣಿ, 'ಅಯ್ಯೋ ಪುಳ್ಳೆ, ದಿಳ್ಳಿದೀಪಾಂತರ, ಬೊಂಬಾಯಿ, ಮದರಾಸು, ಕಲ್ಕತ್ತಾ ಅಂದರೆ ಸದರವೇ! ಅಲ್ಲೆಲ್ಲಾ ನನ್ನಂಥವರು ಓಡಿಸುವ ಸಾವಿರ ಸಾವಿರ ಲಾರಿ. ದೊಡ್ಡವರ ಲಕ್ಷ, ಲಕ್ಷ ಕಾರು. ರಸ್ತೆಯ ಮೇಲೂ ಜನ ಪ್ರವಾಹ. ತಲೆಯ ಮೇಲಿನ ಸೇತುವೆಯಲ್ಲಿ ಭಾರಿ ಸದ್ದು ಮಾಡಿ, ಮಿಂಚಿನಂತೆ ಓಡುವ ಅದೇ ಜನರಿಂದ ತುಂಬಿ ತುಳುಕುವ ರೈಲು. ಆಕಾಶದಲ್ಲಿ ದೇಶ ದೇಶಕ್ಕೆಲ್ಲಾ ಹಾರುವ ವಿಮಾನ. ಆಗ ನಾನು ಎಲ್ಲೆಲ್ಲೋ ಲಾರಿ ನಿಲ್ಲಿಸಿ ಕಾಯಬೇಕಲ್ಲ! ಬಾಯಿಗೆ ಬಟ್ಟೆ ಸುತ್ತಿ ಮಾತೇ ಇಲ್ಲದೇ, ಈ ಪುಸ್ತಕದ ಹಾಳೆ ನೋಡುತ್ತಿದ್ದೆ. ಪಟ್ಟಣತ್ತಿನ ಸಮಾಚಾರ ಹೀಗಾದರೆ ಅರಣ್ಯಮಾರ್ಗದಲ್ಲಿ ಲಾರಿ ಹರಿಸುತ್ತ ಸಾಕಾಗಿ, ಅಲ್ಲೆಲ್ಲೋ ಮರದ ಕೆಳಗೆ ನಿಲ್ಲಿಸಿ, ನಿದ್ದೆ ಬರಲಿಲ್ಲ ಎನ್ನುವಾಗ ತಿರುಗಿ ಇದೇ ಪುಸ್ತಕ ಬಿಡಿಸಿ, ಇದರೊಳಗಿನ ಸಂತರು ನೂರಾರು ವರ್ಷಗಳ ಹಿಂದೆ ಅದೆಷ್ಟು ಸರ್ತಿ ಇದೇ ಕಾಡುನಾಡಿನ ಮಾರ್ಗ ಬರಿಗಾಲಲ್ಲಿ ನಡೆದಿರಬಹುದು ಅಂತ ಯೋಚಿಸುತ್ತಿದ್ದೆನಲ್ಲ! ಲಾರಿಯೊಳಗಿನ ಪೆಟ್ಟಿಗೆಯಲ್ಲಿ ಈ ಪುಸ್ತಕವಿಲ್ಲದಿದ್ದರೆ, ನಾನು ಸತ್ತೇಹೋಗುತ್ತಿದ್ದೆ ನೋಡು' ಎಂದ.

ಆಗ ಕಣ್ಣಾಸೆಲ್ವಿ ಅಚ್ಚರಿ ಬಿದ್ದು ಅಮ್ಮಾಡಿ ಅಪ್ಪನನ್ನು ಬದುಕಿಸಿರಬೇಕಾದರೆ ಈ ಪುಸ್ತಕದಲ್ಲೆಲ್ಲಾ